# ಬೆಳಕು ದೇವರು, ಎಮ್ಮೆ ಪವಿತ್ರ!



**ನೀಲಗಿರಿಯ ಎತ್ತರದ ಬೆಟ್ಟಗಳಲ್ಲಿ ವಾಸಿಸುತ್ತಿರುವ ತೋಡ ಬುಡಕಟ್ಟು ಜನರ ಭಾಷೆ ಮತ್ತು ಸಂಸ್ಕೃತಿ ಎರಡೂ ವಿಭಿನ್ನ. ಕೇವಲ ಒಂದೂವರೆ ಸಾವಿರದಷ್ಟು ಜನಸಂಖ್ಯೆ ಇರುವ ಈ ಸಮುದಾಯ ಕೃಷಿ ಮತ್ತು ಹೈನುಗಾರಿಕೆಯನ್ನು ನಂಬಿ ಬದುಕುತ್ತಿದೆ. ರಕ್ಷಿತ ಅರಣ್ಯದಲ್ಲಿರುವ ಇವರು ಶುದ್ಧ ಸಸ್ಯಾಹಾರಿಗಳು! ಸುಶ್ರಾವ್ಯವಾಗಿ ಹಾಡಿ ಕುಣಿಯುತ್ತಾರೆ, ಆದರೆ ಸಂಗೀತ ಉಪಕರಣಗಳನ್ನು ಬಳಸುವುದಿಲ್ಲ!**

**ಬಿ.ಎಂ. ಹನೀಫ್**



ಪ್ರಕೃತಿಯ ಆರಾಧಕರಾದ ತೋಡ ಜನರಿಗೆ ಇದು 'ಮದರ್‌ಲ್ಯಾಂಡ್ ಆಫ್ ತೋಡಾಸ್'

ಜೂನ್ ಮೂರನೇ ವಾರದಲ್ಲಿ ಹೋದಾಗ ಊಟಿಯಲ್ಲಿ ಮಳೆಗಾಲ ಇನ್ನೂ ಶುರು ಆಗಿರಲಿಲ್ಲ. ಎರಡು ವಾರದ ಹಿಂದೆ ಒಂದು ಸಣ್ಣ ಮಳೆ ಬಂದದ್ದು ಬಿಟ್ಟರೆ, ಉಳಿದಂತೆ ಮೋಡ ಬಿಸಿಲಿನ ಆಟ. ನೀಲಗಿರಿ ಪರ್ವತದ ಬೆಟ್ಟಸಾಲುಗಳಲ್ಲಿ, ಊಟಿಯಿಂದ 15 ಕಿ.ಮೀ. ದೂರದಲ್ಲಿದೆ ಮುತ್ತನಾಡ್ ಮಂಡ್ ಎಂಬ ಪುಟ್ಟ ಹಳ್ಳಿ.

ಹಸುರು ಹೊದ್ದ ಬೆಟ್ಟ ಗುಡ್ಡಗಳ ನಯನ ಮನೋಹರ ನೋಟ. ಗಾಳಿಯಲ್ಲಿ ಮಂಜು ತೇಲಿ ಬಂದು ನೆಲವನ್ನು ಮುತ್ತಿಕ್ಕುವ ದೃಶ್ಯಗಳು ಭೂಲೋಕದ ಮೇಲೆ ಸ್ವರ್ಗವನ್ನು ನೆನಪಿಸುತ್ತಿತ್ತು. ಊಟಿ–ಮೈಸೂರು ಹೆದ್ದಾರಿಯಲ್ಲಿ 15 ಕಿ.ಮೀ. ದೂರ ಬಂದು ಬಲಭಾಗಕ್ಕೆ ತಿರುಗಿದರೆ ಅಲ್ಲೊಂದು ಚಿಕ್ಕ ಪೊಲೀಸ್ ಗೇಟ್ ಇದೆ. ಅಲ್ಲಿಂದ ಎರಡೂವರೆ ಕಿ.ಮೀ. ಅರಣ್ಯದೊಳಕ್ಕೆ ಪಯಣಿಸಬೇಕು. ಗೇಟ್ ಬಳಿ ಕಾರು ನಿಲ್ಲಿಸಿ ಅಲ್ಲಿದ್ದ ಪೊಲೀಸ್ ಪೇದೆಗೆ ವಿಷಯ ತಿಳಿಸಿದೆ.

'ಸರ್ಕಾರದ ಅನುಮತಿ ಇಲ್ಲದೆ ಪ್ರವೇಶ ಇಲ್ಲ ಸಾರ್' ಎಂದರು. ಅದಾಗಲೇ ನಾನು ಊಟಿಯ ಬುಡಕಟ್ಟು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದಲ್ಲಿದ್ದ ರಿಸರ್ಚ್ ಅಸಿಸ್ಟೆಂಟ್ ಜಾನ್ಸಿ ರಾಣಿ ಅವರನ್ನು ಭೇಟಿಯಾಗಿ ಮಾತನಾಡಿದ್ದೆ. ಅವರೂ ಮುತ್ತನಾಡ್ ಮಂಡ್‌ನ ತೋಡ ಬುಡಕಟ್ಟಿನವರು. ಅವರಿಗೆ ಫೋನಾಯಿಸಿ ಆ ಪೊಲೀಸ್ ಪೇದೆಗೆ ಕೊಟ್ಟೆ. ನಾಲ್ಕೈದು ನಿಮಿಷ ಮಾತನಾಡಿದ ಬಳಿಕ ಆ ಪೇದೆ ಗೇಟು ತೆಗೆಯಲು ಒಪ್ಪಿದರು. ಆದರೆ ಹೆದ್ದಾರಿಯಲ್ಲಿ ಜೀಪ್‌ನೊಳಕ್ಕೆ ಕುಳಿತಿದ್ದ ಇನ್ಸ್‌ಪೆಕ್ಟರ್ ಕಡೆಗೆ ಕೈ ತೋರಿಸಿ 'ಅವರೊಡನೆ ಮಾತನಾಡಿ' ಎಂದ. ಅವರಿಗೂ ಹೋಗಿ ಮನದಟ್ಟು ಮಾಡಿಸಿದ ಬಳಿಕ ನಮ್ಮ ಪ್ರಯಾಣಕ್ಕೆ ಅನುಮತಿ ಸಿಕ್ಕಿತು.

ನಾವು ಹೊರಟದ್ದು ನೀಲಗಿರಿ ಕಾಡುಗಳ ಎತ್ತರದ ಪ್ರದೇಶದಲ್ಲಿ ತೋಡ ಬುಡಕಟ್ಟು ಜನರು ನೆಲೆಸಿದ್ದ ಮುತ್ತನಾಡ್ ಮಂಡ್‌ಗೆ. ಮಂಡ್ ಎಂದರೆ ತೋಡ ಭಾಷೆಯಲ್ಲಿ ಗುಡಿಸಲುಗಳ ಗುಂಪು ಎಂದು ಅರ್ಥೈಸಬಹುದು. 14 ಮನೆಗಳ ಪುಟ್ಟ ಹಳ್ಳಿಯದು. ಜನರು ಕೆಲಸಕ್ಕೆ ಹೋಗಿದ್ದರಿಂದ ಬಹುತೇಕ ಮನೆಗಳಿಗೆ ಬೀಗ ಹಾಕಿತ್ತು. ತೋಡ ಬುಡಕಟ್ಟಿನ ಮುಖಂಡ ಟೆಕ್ಕಿಸ್ ಮೋಹನ್ ಮನೆಯತ್ತ ಹೆಜ್ಜೆ ಹಾಕಿದೆವು. ಜಾನ್ಸಿ ರಾಣಿ ಫೋನ್ ಮಾಡಿ ವಿಷಯ ತಿಳಿಸಿದ್ದರಿಂದ ಸಮಸ್ಯೆ ಆಗಲಿಲ್ಲ. ತೋಡ ಮಹಿಳೆಯರು ಕಸೂತಿ ಕಲೆಯಿಂದ ಖುದ್ದಾಗಿ ತಯಾರಿಸುವ, ಕೆಂಪು–ಕಪ್ಪು ಬಣ್ಣದ ಉದ್ದನೆಯ ಸಾಂಪ್ರದಾಯಿಕ ಬಟ್ಟೆಯನ್ನು ಮೈತುಂಬ ಹೊದ್ದುಕೊಂಡೇ ಟೆಕ್ಕಿಸ್ ಮೋಹನ್ ಹೊರಬಂದರು.

ತೋಡ ಒಂದು ವಿಶಿಷ್ಟ ಬುಡಕಟ್ಟು ಜನಾಂಗ. ತಮಿಳುನಾಡಿನ ಉದಕಮಂಡಲ ಮತ್ತು ಕುಂದಾ ಎಂಬ ಎರಡು ತಾಲ್ಲೂಕುಗಳಲ್ಲಿ ಮಾತ್ರ ಇವರ ವಾಸ. 2011ರ ಗಣತಿ ಪ್ರಕಾರ, ಒಟ್ಟು ಜನಸಂಖ್ಯೆ 1370. ಈಗ ಒಂದೂವರೆ ಸಾವಿರ ಆಗಿರಬಹುದು. 1960ರ ದಶಕದಲ್ಲಿ ಇವರ ಜನಸಂಖ್ಯೆ 800ರಷ್ಟು ಇತ್ತಂತೆ. ತಮಿಳುನಾಡು ಸರ್ಕಾರ ಬುಡಕಟ್ಟು ಸಮುದಾಯದ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಕೈಗೊಂಡದ್ದರಿಂದ ಈಗ ಇವರ ಆರೋಗ್ಯದ ಸ್ಥಿತಿ ಉತ್ತಮವಾಗಿದ್ದು, ಬಹುತೇಕ ಎಲ್ಲರೂ